ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ಚಂಬಲ್ ಕಣಿವೆಯ ಡಕಾಯಿತರು

ಚಂಬಲ್ ನದಿಯ ಮೇಲೆ ತೆಪ್ಪ ಹಿಡಿದು ಅಲೆದಾಡಿದರೆ ಇಂಡಿಯನ್ ಸಿಖ್ಮರ್ ಎಂಬ ಅಪರೂಪದ ಪಕ್ಷಿ, ಅಪೂರ್ವ ಜಾತಿಯ ಘಾರಿಯಾಲ್ ಮೊಸಳೆ ಮತ್ತು ಕೆಂಪು ಕಿರೀಟ ಛಾವಣಿಯ ಆಮೆಗಳು ಸಿಗುತ್ತವೆ. ಈ ಹಕ್ಕಿ ನೋಡಲು ತಕ್ಷಣಕ್ಕೆ ರಿವರ್ ಟರ್ನ್ ತರಹ ಕಾಣುತ್ತದೆ.

‘ಚಂಬಲ್ ಕಣಿವೆಗೆ ಹೋಗೋಣೇನ್ರಿ ಮೇಷ್ಟ್ರೇ’ ಎಂದು ಅನಂತಮೂರ್ತಿಗಳು ಕೇಳಿದಾಗ ಗಾಬರಿಯಾಯಿತು. ‘ಅಯ್ಯಯ್ಯಪ್ಪ...ಚಂಬಲ್ ಕಣಿವೆ ಎಂದರೆ ಡಕಾಯಿತರ ವಾಸಸ್ಥಳ. ಅಲ್ಲಿಗೆ ಪಟದ ಚಟವಿರುವ ನಾವು ಯಾಕೆ ಹೋಗಬೇಕು’ ಎಂದೆ. ಸಾಕಷ್ಟು ಸಿನಿಮಾಗಳಲ್ಲಿ ಚಂಬಲ್ ನೋಡಿದ್ದೂ ಹೌದು. ಒಮ್ಮೆ ತುರಂತ್ ಎಕ್ಸ್‌ಪ್ರೆಸ್ ರೈಲಿನಲ್ಲಿ ದೆಹಲಿಗೆ ಹೋಗುವಾಗ ಆ ಪ್ರದೇಶವನ್ನು ಅಣ್ಣ ತೋರಿಸಿದ್ದ. ನಿದ್ದೆಯಲ್ಲಿದ್ದವನು ದಡಬಡಿಸಿ ಎದ್ದು ಕೂತು ನೋಡುವಾಗ ಸಂಜೆಯ ಹೊತ್ತು. ಕಪ್ಪು ಮಣ್ಣಿನ ದೊಡ್ಡ ಗುಪ್ಪೆಗಳು ಬಿಟ್ಟರೆ ಮತ್ತೇನೂ ಅಲ್ಲಿ ಕಂಡಿರಲಿಲ್ಲ. ಗುಹೆಗಳಂತಿರುವ ಅಲ್ಲಿ ಬಚ್ಚಿಟ್ಟುಕೊಂಡವರನ್ನು ಸುಲಭಕ್ಕೆ ಕಂಡು ಹಿಡಿಯಲು ಸಾಧ್ಯವಾಗದ ವಿಚಿತ್ರ ಜಾಗವಾಗಿ ಕಂಡಿತ್ತು.

‘ಡಕಾಯಿತರು, ಕಳ್ಳರು ವಾಸಿಸುವ ಅಪಾಯಕಾರಿ ಜಾಗದಲ್ಲಿ ನಮ್ಮದೇನು ಕೆಲಸ ಸರ್’ ಎಂದು ಅನಂತು ಅವರನ್ನು ಮತ್ತೆ ಕೇಳಿದೆ. ‘ನಾವು ಡಕಾಯಿತರಿಗೆ ಯಾವುದರಲ್ಲಿ ಕಮ್ಮಿ, ಹಕ್ಕಿಗಳ ಬೆನ್ನು ಹತ್ತಿರುವ ನಾವು ಒಂಥರ ಹಂಗೇ ಅಲ್ಲವೇನ್ರಿ’ ಎಂದವರು ನಕ್ಕರು. ಈ ಅನಂತಮೂರ್ತಿ ಎಂಬ ದೈತ್ಯ ಪ್ರತಿಭೆ ನಮ್ಮ ಫೋಟೊ ಪಯಣದ ಗುಂಪಿಗೆ ನಾಯಕ. ನಾನಿವರನ್ನು ಪ್ರೀತಿಯಿಂದ ದ್ರೋಣಾಚಾರ್ಯ ಎನ್ನುತ್ತೇನೆ. ಪಕ್ಷಿ ಪ್ರಪಂಚವನ್ನು ಅರಿದು ಕುಡಿದ ನಿಸ್ಸೀಮ. ಜಗತ್ತಿನ ಮೂಲೆ ಮೂಲೆ ಸುತ್ತುವ ಅಲೆಮಾರಿ. ವರ್ಷದಲ್ಲಿ ಕೆಲವು ದಿನವಷ್ಟೇ ಮನೆಗೆ ಬಂದು ಮುಖ ತೋರಿಸಿ ಎತ್ತಲೋ ಹಾರಿ ಬಿಡುವ ವಲಸೆ ಪಕ್ಷಿ. ನಾವು ಫೋನು ಮಾಡಿದಾಗೆಲ್ಲಾ ಯಾವುದಾದರೂ ಒಂದು ಹಕ್ಕಿಯ ಬೆನ್ನು ಬಿದ್ದಿರುತ್ತಾರೆ. ಜೀವ ಹಿಂಡುವಷ್ಟು ತೊಂದರೆ ಕೊಟ್ಟರೂ ಬೇಸರವಾಗದ ಹಿರಿಯ ಜೀವ. ಪುಟ್ಟ ಮುಂಗೋಪವಿದ್ದು ಅದಕ್ಕೆ ನಾವು ಒಗ್ಗಿ ಹೋಗಿದ್ದೇವೆ.

ನಮ್ಮ ಹಾದಿತೋರುಗ ನ್ಯಾಚುರಲಿಸ್ಟ್ ಲೋಕೇಶ್ ತುಂಬಾ ಬುದ್ಧಿವಂತ ಮನುಷ್ಯ. ಅನೇಕ ಹಕ್ಕಿಗಳ ದನಿಯನ್ನು ತನ್ನ ಬಾಯಲ್ಲೇ ನುಡಿಸುತ್ತಿದ್ದ. ಇವನಿಂದ ನಮಗೆ ಕಾಡಿನ ಸಂದಿ ಮೂಲೆಯಲ್ಲಿ ಅವಿತಿರುವ ಹಕ್ಕಿಗಳಿಗೆ ಕರೆ ಕೊಟ್ಟು ಕರೆಸುವುದು ಸಲೀಸು ಎನಿಸುತ್ತಿತ್ತು. ಹೀಗೆ ಬಾಯಲ್ಲೇ ಪಕ್ಷಿಗಳ ಶಬ್ದ ತೆಗೆಯುವ ಪ್ರಾವೀಣ್ಯ ಹೊಂದಿರುವ ಅನೇಕ ಜನ ನ್ಯಾಚುರಲಿಸ್ಟ್‌ಗಳನ್ನು ನೋಡಿದ್ದೇನೆ. ಅನಂತು ಅವರ ಸಂಗಡ ಕಾಲಕಳೆದು ಪಳಗಿದ ಇವನು ಅವರ